2019 ಕ.ತೀ.ವ 1568

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಜೆಎಂಟಿ ಆಟೊ ಲಿ., –ವಿರುದ್ಧ– ಭಾರತ ಸರ್ಕಾರ ಮತ್ತು ಇತರರು*

**ಆದಾಯ ತೆರಿಗೆ ಅಧಿನಿಯಮ, 10(ಬಿ)ನೇ ಪ್ರಕರಣ ಮತ್ತು ವಿದೇಶಿ ವಾಣಿಜ್ಯ ವ್ಯವಹಾರಗಳ ನಿಯಮ**

**ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರನು ಕೇಂದ್ರ ಸರ್ಕಾರದಿಂದ ವಿದೇಶಿ ವಾಣಿಜ್ಯ ವ್ಯವಹಾರದ ಕುರಿತು ರಫ್ತು ಆಧಾರಿತ ಘಟಕವನ್ನು ನಡೆಸಲು ಅನುಮತಿಯನ್ನು ಪಡೆದು ಸರ್ಕಾರದ ನೀತಿಯ ಅಡಿ ಆದಾಯ ತೆರಿಗೆಯಿಂದ ವಿನಾಯಿತಿಯನ್ನು ಪಡೆದು ಘಟಕವನ್ನು ನಡೆಸುತ್ತಿದ್ದು ವಿದೇಶಿ ವಾಣಿಜ್ಯ ವ್ಯವಹಾರಗಳ ಅಧಿಕಾರಿಗಳು, ರಫ್ತು ಕಟ್ಟುಪಾಡುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅರ್ಜಿದಾರರಿಗೆ ನೀಡಿದ ಅನುಮತಿಯನ್ನು ರದ್ದುಗೊಳಿಸಿ ಐದು ಲಕ್ಷದವರೆಗೆ ದಂಡವನ್ನು ವಿಧಿಸಿರುವುದು ಸರಿಯಾಗಿದೆ. ಉಚ್ಚ ನ್ಯಾಯಾಲಯವು ತೀರ್ಮಾನಿಸಿ ಈ ರಿಟ್ ಅರ್ಜಿಯನ್ನು ತಿರಸ್ಕರಿಸಿದೆ.**

ಅರ್ಜಿದಾರರ ಪರ: ಶ್ರೀ ಎಸ್.ಎಸ್. ಪಾಟೀಲ್ ಹಗೂ ಸಂಜಯ್ ಚಾನಲ್, ವಕೀಲರು;
1 ಮತ್ತು 2ನೇ ಪ್ರತ್ಯರ್ಜಿದಾರರ ಪರ: ಶ್ರೀ ಬಿ.ಬಿ. ಕಣವಿ, ಕೇಂದ್ರ ಸರ್ಕಾರಿ ಸ್ಥಾಯಿ ನ್ಯಾಯವಾದಿ
3ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಸ್.ಎನ್. ರಾಜೇಂದ್ರ, ಕೇಂದ್ರ ಸರ್ಕಾರಿ ಸ್ಥಾಯಿ ನ್ಯಾಯವಾದಿ

*ರಿಟ್ ಅರ್ಜಿ ಸಂಖ್ಯೆ: 107971/2015 (ಜಿಎಂ–ಆರ್‌ಇಎಸ್), ದಿನಾಂಕ 13ನೇ ಫೆಬ್ರವರಿ, 2019.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಜಿ. ನರೇಂದರ್:**

ಈ ರಿಟ್ ಅರ್ಜಿಯನ್ನು, ಈ ನ್ಯಾಯಾಲಯವು ನೀಡಿದ ಮಧ್ಯಂತರ ಆದೇಶವನ್ನು ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ಮಧ್ಯಂತರ ಅರ್ಜಿ/2018ನ್ನು ಪರಿಗಣನೆಗೆ ಪಟ್ಟಿ ಮಾಡಲಾಯಿತು. ರಿಟ್ ಅರ್ಜಿಯು ಸೀಮಿತ ಪರಿಧಿಯಲ್ಲಿರುವುದರಿಂದ, ವಕೀಲರ ಸಮ್ಮತಿಯೊಂದಿಗೆ, ಇದನ್ನು ವಿಲೆಗಾಗಿ ಕೈಗೆತ್ತಿಕೊಳ್ಳಲಾಗಿರುತ್ತದೆ.

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಹಾಗೂ ಪ್ರತ್ಯರ್ಜಿದಾರ ಸಂಖ್ಯೆ:1 ರಿಂದ 3ರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಸ್.ಎನ್. ರಾಜೇಂದ್ರರವರ ಅಹವಾಲನ್ನು ಆಲಿಸಿರುತ್ತೇನೆ.

2. ಅರ್ಜಿದಾರರು, ಅಭಿವೃದ್ಧಿ ಆಯುಕ್ತರು, ಕೊಚ್ಚಿನ್ ವಿಶೇಷ ಆರ್ಥಿಕ ವಲಯ, ಬೆಂಗಳೂರು ಇವರು ದಿನಾಂಕ: 08.01.2013ರಂದು ಹೊರಡಿಸಿದ ಪರಿಷ್ಕರಣೆಯಲ್ಲಿನ ಆದೇಶವನ್ನು ಎತ್ತಿಹಿಡಿಯಲು ಅಪೀಲು ಪ್ರಾಧಿಕಾರವನ್ನು ಕೋರಲಾಗಿದ್ದು, ಅದರ ಮೂಲಕ, ಕಡತ ಸಂಖ್ಯೆ:01/92/71/23ಎಎಂ-16/ ಪಿಸಿ-VI/100ರಲ್ಲಿ ಹೊರಡಿಸಿದ ದಿನಾಂಕ:15.06.2015ರ ಆದೇಶದ ಮೂಲಕ ಬಾಧಿತರಾಗಿದ್ದು ಈಗ ಈ ನ್ಯಾಯಾಲಯದಲ್ಲಿ ಸದರಿ ಆದೇಶವನ್ನು ಪ್ರಶ್ನಿಸಿರುತ್ತಾರೆ.

3. ಅರ್ಜಿದಾರನು, ದಿನಾಂಕ: 08.10.2007ರಂದು ಅನುಮತಿಯ ಪತ್ರವನ್ನು ನೀಡಿದ್ದು, ಆ ಮೂಲಕ, 1,05,000 ಸಂಖ್ಯೆಯ ವಾರ್ಷಿಕ ಸಾಮರ್ಥ್ಯದೊಂದಿಗೆ 6-12" ಕಪ್ಪುಗಳು ಹಾಗೂ ಕೋನ್‌ಗಳನ್ನು ತಯಾರಿಸುವ ಉದ್ದೇಶಕ್ಕೆ ಸಂಬಂದಿಸಿದಂತೆ ಪ್ಲಾಟ್ ಸಂಖ್ಯೆ:224-ಬಿ, ಕೆಐಎಡಿಬಿ, ಬೇಲೂರು, ಧಾರವಾಡ,

ಕರ್ನಾಟಕ-580011ರಲ್ಲಿ ಅರ್ಜಿದಾರರು ಸುಸ್ಥಾಪಿಸಿದ ಉದ್ಯಮದ ಸಂಬಂಧದಲ್ಲಿ 2004-09ನೇ ಸಾಲಿನ ವಿದೇಶಿ ವಾಣಿಜ್ಯ ಕಾರ್ಯನೀತಿಯಡಿಯಲ್ಲಿ ಯೋಜಿಸಿದಂತಹ ಯೋಜನೆಗೆ ಬದಲಾಗಿ ರಫ್ತು ಆಧಾರಿತ ಘಟಕದಂತೆ ಕಾರ್ಯ ನಿರ್ವಹಿಸಲು ಅರ್ಜಿದಾರ ಘಟಕಕ್ಕೆ ಅನುಮತಿ ನೀಡಲಾಗಿರುತ್ತದೆಂಬುದು ಸಂಕ್ಷಿಪ್ತ ವಾಸ್ತವಾಂಶವಾಗಿರುತ್ತದೆ.

4. ಅನುಮತಿ ಪತ್ರವನ್ನು, ಅದರಲ್ಲಿ ವಿಧಿಸಿದ ಕೆಲವು ಷರತ್ತುಗಳಿಗೆ ಹಾಗೂ ಅನುಬಂಧದಲ್ಲಿ ಒಳಗೊಂಡಂಥ ನಿಗದಿತ ಷರತ್ತುಗಳಿಗೆ ಒಳಪಟ್ಟು ನೀಡಲಾಗಿರುತ್ತದೆ. ಅನುಮತಿಯ ಪತ್ರದಡಿಯಲ್ಲಿನ ಕಂಡಿಕೆ 2 ರಲ್ಲಿ, ಕೆಲವು ಷರತ್ತುಗಳನ್ನು ವಿಧಿಸಲಾಗಿದ್ದು, ಕೆಲವು ಸೌಲಭ್ಯಗಳನ್ನು ವಿಸ್ತರಿಸಲಾಗಿರುತ್ತದೆ. ಘಟಕವನ್ನೂ ಅನುಮತಿ ಪತ್ರದಡಿಯಲ್ಲಿ ಪ್ರದತ್ತವಾದ ಸೌಲಭ್ಯಗಳಿಗೆ ಬದಲಾಗಿ ಕೆಲವು ಹೊಣೆಗಾರಿಕೆಗಳನ್ನು ಭರಿಸಲು ಅಗತ್ಯಪಡಿಸಲಾಗಿತ್ತು. ವಿಶೇಷವಾಗಿ, 2ನೇ ಪ್ಯಾರಾದ ಖಂಡ-(i)ರಡಿಯಲ್ಲಿ ವಿಧಿಸಿದ ಷರತ್ತು ವಾಣಿಜ್ಯ ಉತ್ಪಾದನೆಯು ಆರಂಭವಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಸಂಬಂಧಿಸಿದಂತೆ ಘಟಕವು, ತಿರಸ್ಕರಣೆಗಳನ್ನು ಹೊರತುಪಡಿಸಿ ಇಡೀ ಉತ್ಪಾದನೆಗಳನ್ನು ಘಟಕವು ರಫ್ತು ಮಾಡತಕ್ಕದ್ದೆಂಬುದು ಆಜ್ಞಾಪಕವಾಗಿರುತ್ತದೆ. ಅನುಮತಿಯ ಸದರಿ ಪತ್ರದಡಿಯಲ್ಲಿ ಕೆಲವು ಇತರೆ ಷರತ್ತುಗಳನ್ನು ವಿಧಿಸಿದ್ದಾಗ್ಯೂ, ಈ ನ್ಯಾಯಾಲಯವು, ಸದರಿ ಸಂಕ್ಷಿಪ್ತ ವಾಸ್ತವಾಂಶದಿಂದಲೇ ಮತ್ತೊಂದು ರೀತಿಯಲ್ಲಿ ಮೇಲೆ ಉಲ್ಲೇಖಿಸಿದ ಷರತ್ತುಗಳನ್ನು ಆಧರಿಸಿ ರಿಟ್ ಅರ್ಜಿಯನ್ನು ವಿಲೆ ಮಾಡಬಹುದೆಂಬುದು ನಮ್ಮ ನಿಶ್ಚಿತ ಅಭಿಪ್ರಾಯವಾಗಿರುತ್ತದೆ.

5. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಅರ್ಜಿದಾರರು ತಮ್ಮ ಸ್ವಂತ ಉತ್ಪನ್ನಗಳನ್ನು ಉತ್ಪಾದಿಸದೆ ಅಸ್ತಿತ್ವದಲ್ಲಿರುವ ಕೇವಲ ಸ್ಥಳೀಯ ಸುಂಕ ವಲಯ ಅಥವಾ ಸ್ಥಳೀಯ ಮಾರುಕಟ್ಟೆಗಳಲ್ಲಿನ ಎನ್ಟಿಟಿಗಳಿಗೆ ಜಾಬ್ ವರ್ಕ್‌ಗಳನ್ನು ಮಾಡುತ್ತಿದ್ದು, ಆದಾಯ ತೆರಿಗೆ ಅಧಿನಿಯಮದ 10(ಬಿ) ಪ್ರಕರಣದಡಿಯಲ್ಲಿನ ಸುಂಕ ಮುಕ್ತ ಆಮದುಗಳು ಹಾಗೂ ವಿನಾಯಿತಿಗಳು ಲಭ್ಯವಾಗುವಂತಿದ್ದಾಗ್ಯೂ,

ಯಾವುದೇ ತಮ್ಮ ರಫ್ತಿನ ಬಾಧ್ಯತೆಗಳು ಹಾಗೂ ಹೊಣೆಗಾರಿಕೆಯನ್ನು ಅರ್ಜಿದಾರರು ಭರಿಸಿರುವುದಿಲ್ಲ. ಪ್ಯಾರಾ 2ರ ಖಂಡ (vi)ರಡಿಯಲ್ಲಿ, ಅನುಮತಿ ಪತ್ರವನ್ನು ಮೂರು ವರ್ಷಗಳ ಅವಧಿಗೆ ಸಿಂಧುವಾಗುವಂತೆ ರೂಪಿಸಿ, ಆ ಅವಧಿಯೊಳಗೆ ಪರಿಯೋಜನೆಯನ್ನು ಅನುಷ್ಠಾನಗೊಳಿಸಲು ಅರ್ಜಿದಾರರನ್ನು ಅಲ್ಲದೆ ವಾಣಿಜ್ಯ ಉತ್ಪಾದನೆಗಳನ್ನು ಆರಂಭಿಸಲೂ ಸಹ ಅಗತ್ಯಪಡಿಸಿರುತ್ತದೆ.

6ನೇ ಖಂಡವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

> *"vi. ಈ ಅನುಮತಿ ಪತ್ರವು, ಇದನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳವರೆಗೂ ಸಿಂಧುವಾಗಿದ್ದು, ಈ ಅವಧಿಯೊಳಗೆ, ನೀವು ಪರಿಯೋಜನೆಯನ್ನು ಜಾರಿಗೊಳಿಸಿ, ವಾಣಿಜ್ಯ ಉತ್ಪನ್ನಗಳನ್ನು ಆರಂಭಿಸಬೇಕು ಹಾಗೂ ಸದರಿ ಅವಧಿಯು ಕೊನೆಗೊಳ್ಳುವ ಮೊದಲೇ ಸಿಂಧುತ್ವದ ವಿಸ್ತರಣೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ, ಇದು ಸ್ವಯಂಚಾಲಿತವಾಗಿಯೇ ನಿಂತುಹೋಗುತ್ತದೆ. ವಾಣಿಜ್ಯ ಉತ್ಪನ್ನಗಳನ್ನು ಉತ್ಪಾದನೆಯನ್ನು ಆರಂಭಿಸಿದ ದಿನಾಂಕವನ್ನು ಅಭಿವೃದ್ಧಿ ಆಯುಕ್ತರು, ಕೊಚ್ಚಿನ್ ವಿಶೇಷ ಆರ್ಥಿಕ ವಲಯ, ಇವರಿಗೆ ಸೂಚಿಸತಕ್ಕದ್ದು".*

6. ವಿದೇಶಿ ವಾಣಿಜ್ಯ ಕಾರ್ಯನೀತಿಯಡಿಯಲ್ಲಿ ಉದ್ಭವಿಸಿದ ಹೊಣೆಗಾರಿಕೆಗಳು ಹಾಗೂ ಅನುಮತಿ ಪತ್ರದಿಂದ ನಿಗದಿತ ಷರತ್ತುಗಳಿಂದ ಉದ್ಭವಿಸಿದ ಹೊಣೆಗಾರಿಕೆಗಳ ಅನನುಪಾಲನೆಯ ಗ್ರಹಿಕೆಯ ಹಿನ್ನೆಲೆಯಲ್ಲಿ, ಮೂಲ ಪ್ರಾಧಿಕಾರವು ದಿನಾಂಕ: 25.04.2012ರಂದು ಕಾರಣ ಕೇಳುವ ನೋಟೀಸನ್ನು ನೀಡಿರುತ್ತದೆ. ಇದಕ್ಕೆ ದಿನಾಂಕ: 06.07.2012ರ ಉತ್ತರದ ಮೇರೆಗೆ ಅರ್ಜಿದಾರರು ಉತ್ತರಿಸಿರುತ್ತಾರೆ. ಪ್ರತ್ಯುತ್ತರದ 2ನೇ ಪ್ಯಾರಾದಲ್ಲಿ ಈ ಮುಂದಿನಂತೆ ವಾದಿಸಲಾಗಿರುತ್ತದೆ:

> *"ಬೇರೆ ಬೇರೆ ಉತ್ಪಾದಕರಿಂದ ಸ್ವೀಕರಿಸಿದ ಪೂರ್ಣಗೊಳ್ಳದ ಸ್ಥಿತಿಯಲ್ಲಿರುವ ಕಪ್ಪುಗಳು ಹಾಗೂ ಕೋನ್‌ಗಳನ್ನು ಪರಿಶೀಲಿಸಿ/*

*ಪರೀಕ್ಷಿಸಿ, ಸ್ವಚ್ಛಗೊಳಿಸಿ, ಬಿಸಿ ಮಾಡಲು ಸಿದ್ಧಗೊಳಿಸಿ (ಪ್ರೀ–ಹೀಟೆಡ್) ಇಂಗಾಲ ಪೂರಣಗೊಳಿಸಿ ತೊಳೆದು, ತಪಾಸಣೆ ಮಾಡಿ, ಪರಿಶೀಲಿಸಿ, ತರುವಾಯ ಮೆ॥ ಟಿಂಕೆನ್ ಇಂಡಿಯಾ ಮ್ಯಾನುಫ್ಯಾಕ್ಚರ್ಸ್ ಪ್ರೈವೇಟ್ ಲಿಮಿಟೆಡ್, ಎಸ್‌ಇಝೆಡ್ ಇದಕ್ಕೆ ರವಾನಿಸಲಾಗಿರುತ್ತದೆ. ಹಾಗಾಗಿ, ಕಪ್ಸ್ ಹಾಗೂ ಕೋನ್‌ಗಳ ಕಾರ್ಯ ವಿಧಾನದ ಸರಣಿಗಳ ಮೂಲಕ ಇಂಗಾಲ ಪೂರಣಗೊಳಿಸುವಿಕೆ ಅಥವಾ ಬಿಸಿ ಮಾಡಲು ಸಿದ್ಧಗೊಳಿಸಿವುದಕ್ಕೆ ಒಳಪಟ್ಟಿರುತ್ತವೆ ಹಾಗೂ ಸಂಸ್ಕರಣೆ ಹಾಗೂ ಪರಿಶೀಲನೆಯ ತರುವಾಯ ನಿರ್ದಿಷ್ಟಪಡಿಸಿದ ಗುಣಮಟ್ಟದ ಸರಕುಗಳನ್ನು ತೆರವುಗೊಳಿಸಲಾಗಿರುತ್ತದೆ. ಇದರಿಂದ ಅವುಗಳನ್ನು ಆಟೋಮೊಬೈಲ್‌ಗಳಿಗೆ ಸಂಬಂಧಿಸಿದಂತೆ ಬೇರಿಂಗ್‌ಗಳಲ್ಲಿನ ಭಾಗ/ಘಟಕದಂತೆ ಬಳಸಬಹುದಾಗಿರುತ್ತದೆ. ವಿಶೇಷ ಆರ್ಥಿಕ ವಲಯದ ಘಟಕವು ಸಿಎಚ್‌ಎಚ್ 84820000 ಗಳಡಿಯಲ್ಲಿ ಬರುವ ಬೇರಿಂಗ್‌ನ ತಯಾರಿಕೆಗೆ ಸಂಬಂಧಿಸಿದಂತೆ ಈ ಘಟಕಗಳನ್ನು ಬಳಸುತ್ತದೆ".*

7. ಪ್ರತ್ಯುತ್ತರದ ವಿಶೇಷವಾಗಿ ಪ್ರತ್ಯುತ್ತರದ 2ನೇ ಪ್ಯಾರಾದ ಓದಿನಿಂದ, ರಫ್ತು ಮೂಲದಘಟಕಕ್ಕೆ ಲಭ್ಯವಾಗುವಂಥ ನಮೂನೆಯಲ್ಲಿನ ಕೆಲವು ಸೌಲಭ್ಯಗಳನ್ನು ಅರ್ಜಿದಾರರ ಮೇಲೆ ಪ್ರದತ್ತಗೊಳಿಸುವ ಮೂಲಕ ನೀಡಬೇಕಾದ ಅನುಮತಿ ಪತ್ರದಡಿಯಲ್ಲಿ ವಿದೇಶಿ ವಾಣಿಜ್ಯ ಕಾರ್ಯ ನೀತಿಯಲ್ಲಿ ಅಗತ್ಯಪಡಿಸಿದಂಥ ರಫ್ತು ಹೊಣೆಗಾರಿಕೆಗಳನ್ನು ಅರ್ಜಿದಾರರು ಪೂರೈಸಿರುವುದಿಲ್ಲವೆಂಬುದು ಸ್ಪಷ್ಟವಾಗಿ ಗೋಚರಿತವಾಗಿರುತ್ತದೆ.

8. ಮೂಲ ಪ್ರಾಧಿಕಾರವು, ಅರ್ಜಿದಾರರಿಗೆ ಖುದ್ದಾಗಿ ಅಹವಾಲು ಸಲ್ಲಿಸುವ ಅವಕಾಶ ನೀಡಿದ್ದು, ತರುವಾಯ, ಲಭ್ಯವಾದ ಎಲ್ಲಾ ದಾಖಲೆಗಳು ಹಾಗೂ ಸಾಮಗ್ರಿಗಳ ಹಿನ್ನೆಲೆಯಲ್ಲಿ, ಮೂಲ ಆದೇಶವನ್ನು ಹೊರಡಿಸಲು ಕೋರಲಾಗಿದ್ದು, ಆ ಮೂಲಕ ಅನುಮತಿಯ ಪತ್ರವನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದ್ದು, 5,00,000/– ರೂ.ಗಳ ಜುಲ್ಮಾನೆಯನ್ನು ಅನುಮತಿ ಪತ್ರದಡಿಯಲ್ಲಿ

ವಿಧಿಸಲಾದ ಹೊಣೆಗಾರಿಕೆಗಳನ್ನು ಈಡೇರಿಸದ ಕಾರಣದ ಮೇಲೆ ವಿಧಿಸಲಾಗಿದ್ದು, ಇದರಿಂದ ಬಾಧಿತರಾದ ಅರ್ಜಿದಾರರು ಅಪೀಲನ್ನು ಸಲ್ಲಿಸಿರುತ್ತಾರೆ. ಅಪೀಲು ಪ್ರಾಧಿಕಾರವು, ಮೂಲ ಪ್ರಾಧಿಕಾರದ ಆದೇಶವು ನೀಡಿದ ವಾಸ್ತವಾಂಶದ ನಿರ್ಣಯದ ಮೂಲಕ ಪ್ರವರ್ಗೀಯವಾರಾಗಿ, ಅರ್ಜಿದಾರರು ಯಾವುದೇ ರಫ್ತು ವಹಿವಾಟನ್ನು ನಿರ್ವಹಿಸುವಂತಿಲ್ಲ ಹಾಗೂ ಅರ್ಜಿದಾರರು ನಿರ್ವಹಿಸುವ ಜಾಬ್ ವರ್ಕ್‌ಗಳು ಭಾವಿತ ರಫ್ತಿಗೆ ಕಾರಣವಾಗುವಂತಿಲ್ಲ ಅಥವಾ ಅವುಗಳನ್ನು ಭಾವಿತ ರಫ್ತುಗಳೆಂದು ಅರ್ಥೈಸಿಕೊಳ್ಳುವಂತಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ತದನುಸಾರವಾಗಿ, ಇದು ಅಪೀಲನ್ನು ತಿರಸ್ಕರಿಸಿರುತ್ತದೆ. ಹಾಗಾಗಿ, ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಬಂದಿರುತ್ತಾರೆ.

9. ಅನುಮತಿ ಪತ್ರದ ಮೇರೆಗೆ ಅರ್ಜಿದಾರ ಕಾರ್ಖಾನೆಯ ಮೇಲೆ ವಿಧಿಸಲಾದಂಥ ಯಾವುದೇ ಹೊಣೆಗಾರಿಕೆಗಳನ್ನು ಅನುಸರಣೆಯಲ್ಲಿ ಇದು ವಿಫಲವಾಗಿದೆಯೆಂಬುದರಲ್ಲಿ ನಿರಾಕರಿಸುವಂಥ ಯಾವುದೇ ಅಂಶವಿರುವುದಿಲ್ಲ. ಅನುಮತಿಯ ಪತ್ರವು, ಘಟಕವನ್ನು ಪತ್ರದ 2ನೇ ಪ್ಯಾರಾದ (iv)ನೇ ಖಂಡದಡಿಯಲ್ಲಿ ವಿಧಿಸಿದ ಷರತ್ತಿಗೆ ಒಳಪಟ್ಟು ಒಂದು ಷರತ್ತು ಪೂರ್ವಕ ರಫ್ತು ಆಧಾರಿತ ಘಟಕದಂತೆ ಪರಿಗಣಿಸಿ, ಈ ನ್ಯಾಯಾಲಯವು, ಅವರು ನೀಡಿದ ನಿರ್ಣಯಕ್ಕೆ ಬರಲು ಮೂಲ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರ ಪಾಲಿಸಿರುವ ತರ್ಕದಲ್ಲಿ ಯಾವುದೇ ದೋಷ ಅಥವಾ ವ್ಯತಿರಿಕ್ತತೆಯನ್ನು ಕಂಡಿರುವುದಿಲ್ಲ. ಅಪೀಲು ಪ್ರಾಧಿಕಾರವು ದೃಢೀಕರಿಸಿದಂತೆ ಮೂಲ ಪ್ರಾಧಿಕಾರವು ಹೇಳಿರುವ ವಾಸ್ತವಾಂಶದ ನಿರ್ಣಯಕ್ಕೆ ವಿರುದ್ಧವಾದ ನಿರ್ಣಯಕ್ಕೆ ಬರಲು ಈ ನ್ಯಾಯಾಲಯಕ್ಕೆ ಸಂಬಂಧಿಸಿದ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಯಾವುದೇ ಮುಖ್ಯ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ ಅಥವಾ ಮಂಡಿಸಿರುವುದಿಲ್ಲ.

ವಿಷಯದ ಈ ಹಿನ್ನೆಲೆಯಲ್ಲಿ, ಯಾವುದೇ ಹುರುಳಿಲ್ಲದ ಈ ಅರ್ಜಿಯು ತಿರಸ್ಕೃತವಾಗಿರುತ್ತದೆ.

---